ನಕ್ಷತ್ರಪಟ



ಗಿರೀಶ ಸೊಲ್ಲಾಪುರ

ಕಲೆ: ಸಂತೋಷ್ ಸಸಿಹಿತ್ಲು



# ಪುಟ್ಟನ ಕನಸು

ರಾತ್ರಿ ಕನಸ
ಕಂಡ ಪುಟ್ಟ
ನಿದ್ದೆ ಮಾಡುತ

ದಾರಿಯಲ್ಲಿ
ನಡೆಯುತ್ತಿದ್ದ
ಶಿಳ್ಳೆ ಹಾಕುತ

ಹದ್ದು ಒಂದು
ಹಾರುತಿತ್ತು
ಗದ್ದೆ ಹತ್ತಿರ

ಉದ್ದನೆಯ
ಹಾವು ಕಂಡ
ಮರದ ಹತ್ತಿರ

ಹೊಂಚು ಹಾಕುತ್ತಿದ್ದ
ಹದ್ದು
ಹಾವು ಹಿಡಿಯಿತು

ಕೊಸರಿಕೊಂಡು
ಹಾವು ಜಾರಿ
ಮೇಲೆ ಬಿದ್ದಿತು

ಅಯ್ಯೋ ಹಾವು
ಅಯ್ಯೋ ಹಾವು
ಎಂದು ಚೀರಿದ

ಪಕ್ಕದಲ್ಲಿ ಇದ್ದ
ಅಮ್ಮ
ಗುದ್ದು ಕೊಟ್ಟಳು

ನಿದ್ದೆಯಿಂದ
ಎದ್ದ ಪುಟ್ಟ
ಕಣ್ಣು ಉಜ್ಜುತ

ತಾನು ಕಂಡ
ಕನಸು ತಿಳಿದು
ಹೊದ್ದು ಮಲಗಿದ

